## ಪ್ರಾರ್ಥನೆ

ಕುಂದೇಂದೀವರಸುಂದರಾವತಿಬಲೌ ವಿಜ್ಞಾನಧಾಮಾವುಭೌ
ಶೋಭಾಢ್ಯೌ ವರಧನ್ವಿನೌ ಶ್ರುತಿನುತೌ ಗೋವಿಪ್ರವೃಂದಪ್ರಿಯೌ।
ಮಾಯಾಮಾನುಷರೂಪಿಣೌ ರಘುವರೌ
ಸದ್ಧರ್ಮವರ್ಮೌ ಹಿ ತೌ
ಸೀತಾನ್ವೇಷಣತತ್ಪರೌ ಪಥಿ ಗತೌ ಭಕ್ತಿಪ್ರದೌ ತೌ ಹಿ ನಃ ॥

ನೀಲ ಕಮಲದ ಮತ್ತು ಮಲ್ಲಿಗೆಯ ಹಾಗೆ ಸುಂದರರಾಗಿರುವವರೂ, ಅತಿ ಬಲಶಾಲಿಗಳೂ, ಜ್ಞಾನದ ಆಗರಗಳೂ, ಅತ್ಯಂತ ಅಂದವಾದ ಆಕಾರವುಳ್ಳವರೂ, ಶ್ರೇಷ್ಠ ಬಿಲ್ಲುಗಾರರೂ, ವೇದಗಳಿಂದ ಹೊಗಳಲ್ಪಟ್ಟವರೂ, ಗೋಬ್ರಾಹ್ಮಣಪ್ರಿಯರೂ, ಮಾಯೆಯ ಮೂಲಕ ಮಾನವರೂಪವನ್ನು ಹೊಂದಿದವರೂ, ಸದ್ಧರ್ಮಕ್ಕೆ ಕವಚದಂತಿರುವವರೂ, ಹಿತಕಾರಿಗಳೂ, ಸೀತಾನ್ವೇಷಣದಲ್ಲಿ ನಿರತರಾಗಿರುವವರೂ ಆದ ರಾಮ ಲಕ್ಷ್ಮಣರು ನಮಗೆ ಭಕ್ತಿಯನ್ನು ಅನುಗ್ರಹಿಸಲಿ.

ಬ್ರಹ್ಮಾಂಭೋಧಿಸಮುದ್ಭವಂ ಕಲಿಮಲಪ್ರಧ್ವಂಸನಂ ಚಾವ್ಯಯಂ
ಶ್ರೀಮಚ್ಛಂಭುಮುಖೇಂದುಸುಂದರವರೇ
ಸಂಶೋಭಿತಂ ಸರ್ವದಾ ।
ಸಂಸಾರಾಮಯಭೇಷಜಂ ಸುಖಕರಂ ಶ್ರೀಜಾನಕೀಜೀವನಂ
ಧನ್ಯಾಸ್ತೇ ಕೃತಿನಃ ಪಿಬಂತಿ ಸತತಂ ಶ್ರೀರಾಮನಾಮಾಮೃತಮ್ ॥

ವೇದಗಳೆಂಬ ಅಂಬುಧಿಯಿಂದ ಕಡೆದಾಗ ಬಂದ, ಕಲಿಮಲವನ್ನು ನಾಶಮಾಡುವ, ಅವ್ಯಯವಾಗಿರುವ, ಶಿವನ ಮುಖಕಮಲದಲ್ಲಿ ಸದಾ ನಲಿಯುತ್ತಿರುವ, ಈ ಸಂಸಾರಕ್ಕೆ ಸುಖವನ್ನುಂಟುಮಾಡುವ ಔಷಧರೂಪವಾಗಿರುವ, ಜಾನಕಿಯ ಜೀವನವಾಗಿರುವ ರಾಮನಾಮಾಮೃತವನ್ನು ಪಾನ ಮಾಡುವಂತಹವರು ಧನ್ಯರು.

ಶಾಂತಂ ಶಾಶ್ವತಮಪ್ರಮೇಯಮನಘಂ
ನಿರ್ವಾಣಶಾಂತಿಪ್ರದಂ
ಬ್ರಹ್ಮಾಶಂಭುಫಣೀಂದ್ರಸೇವ್ಯಮನಿಶಂ ವೇದಾಂತವೇದ್ಯಂ ವಿಭುಂ ।
ರಾಮಾಖ್ಯಂ ಜಗದೀಶ್ವರಂ ಸುರಗುರುಂ ಮಾಯಾಮನುಷ್ಯಂ ಹರಿಂ
ವಂದೇಽಹಂ ಕರುಣಾಕರಂ ರಘುವರಂ
ಭೂಪಾಲಚೂಡಾಮಣಿಮ್ ॥

ಶಾಂತನೂ ಶಾಶ್ವತನೂ ಅಪ್ರಮೇಯನೂ ಪಾಪರಹಿತನೂ ನಿರ್ವಾಣವೆಂಬ ಶಾಂತಸ್ಥಿತಿಯನ್ನು ನೀಡುವವನೂ, ಬ್ರಹ್ಮ, ಶಂಭು, ಆದಿಶೇಷ ಇವರಿಂದ ಸದಾ ಸೇವ್ಯನೂ, ವೇದಾಂತದ ಮೂಲಕ ವೇದ್ಯನೂ, ಸರ್ವವ್ಯಾಪಿಯೂ, ಸುರಗುರುವೂ, ಮಾಯೆಯ ಮೂಲಕ ಮನುಷ್ಯರೂಪವನ್ನು ಧರಿಸಿರುವವನೂ, ಪಾಪಹರನೂ, ಕರುಣಾಕರನೂ, ಭೂಪಾಲ ಚೂಡಾಮಣಿಯೂ, ರಘುವರನೂ, ರಾಮನೆಂಬ ಹೆಸರುಳ್ಳವನೂ ಆದ ಜಗದೀಶ್ವರನನ್ನು ನಮಿಸುತ್ತೇನೆ.

## ಸೂಕ್ತಿಪ್ರಭ

- ಅಡಚಣೆಗಳಿಲ್ಲದ ಜೀವನ ಸುಖಜೀವನವಲ್ಲ. ಅವುಗಳನ್ನು ಗೆಲ್ಲುವುದರಿಂದ ಜೀವನದಲ್ಲಿ ಸುಖವಿದೆ. ತಲೆಯನ್ನು ಎಂದಿಗೂ ಬಗ್ಗಿಸಬೇಡ. ಸದಾ ಧೀರನಾಗಿ ಮುನ್ನಡೆ. ಜಗತ್ತನ್ನು ನೇರವಾದ ದೃಷ್ಟಿಯಿಂದ ನೋಡಲು ಪ್ರಯತ್ನಿಸು. —ಹೆಲೆನ್ ಕೆಲ್ಲರ್
- ಮನುಷ್ಯನ ಜೀವನಕ್ಕೆ ಅತ್ಯವಶ್ಯವಾದ ಸಮಯ ಮತ್ತು ಸಂಪತ್ತನ್ನು ದುರ್ಮಾರ್ಗಿಗಳು ಜೂಜಿನಿಂದ ಕಳೆದುಕೊಳ್ಳುತ್ತಾರೆ. —ಜಾರ್ಜ್ ವಾಷಿಂಗ್‌ಟನ್
- ಕೆಲಸಗಳನ್ನು ನಿರ್ವಹಿಸಲು ಹೆಚ್ಚು ಸಾಮರ್ಥ್ಯ ಬೇಕಾಗುವುದಿಲ್ಲ. ಯಾವುದನ್ನು ಯಾವಾಗ ಮಾಡಬೇಕು ಎಂದು ತೀರ್ಮಾನಿಸಲು ಸಾಮರ್ಥ್ಯವಿರಬೇಕು. —ಎಲ್ಬರ್ಟ್ ಹಬ್ಬರ್ಡ್
- ಕೇವಲ ತಮ್ಮಲ್ಲಿನ ಪೂರ್ವಗ್ರಹಗಳನ್ನು ಆಚೀಚೆ ಜೋಡಿಸಿಕೊಳ್ಳುತ್ತ ಬಹಳಷ್ಟು ಜನ ತಾವು ಆಲೋಚಿಸುತ್ತಿರುವೆವು ಎಂದು ಭಾವಿಸುತ್ತಾರೆ. —ವಿಲಿಯಂ ಜೇಮ್ಸ್
- ನುರಿತ ಬಿಲ್ಲುಗಾರನು ಲಕ್ಷ್ಯವನ್ನು ಚೆನ್ನಾಗಿ ಗಮನಿಸಿದ ನಂತರ ಬಾಣವನ್ನು ಬಿಡುವನು. ಅಂತೆಯೇ ವಿದ್ವಜ್ಜನರು ಕಾರ್ಯವನ್ನು ಪ್ರಾರಂಭಿಸುವ ಮೊದಲೇ ಅದರ ಪರಿಣಾಮ ಹಾಗೂ ಉದ್ದೇಶಗಳನ್ನು ಕುರಿತು ಚೆನ್ನಾಗಿ ಆಲೋಚಿಸುವರು. —ಚಿತ್ರಭಾನು
- ಕಷ್ಟಪಟ್ಟು ದುಡಿದು, ನಗುನಗುತ್ತ ಪ್ರೀತಿಯಿಂದ ಎಲ್ಲರೊಂದಿಗೆ ಬಾಳುವವನೇ ಯಶಸ್ಸನ್ನು ಪಡೆದಿರುತ್ತಾನೆ. —ಎಲ್ಬರ್ಟ್ ಹಬರ್ಡ್
- ಅಡಚಣೆಗಳನ್ನು ನಿರ್ಲಕ್ಷಿಸುವುದು ಧೀರತನವಲ್ಲ. ಅವುಗಳನ್ನು ಎದುರಿಸಿ, ಗೆಲ್ಲುವುದೇ ಧೀರತನ. —ಅನಾಮಿಕ
- ನಮ್ಮ ಜೀವನದ ಅಮೂಲ್ಯ ಘಟನೆಗಳನ್ನು ಇತರರೊಂದಿಗೆ ಹಂಚಿಕೊಂಡಾಗ ಅವುಗಳ ಮಹತ್ವ ಹೆಚ್ಚುತ್ತದೆ. —ಅನಾಮಿಕ
- ಉತ್ಸಾಹದಲ್ಲಿ ನಿಜವಾಗಿಯೂ ಚಮತ್ಕಾರವಿದೆ. ಇದೇ ಸಾಮಾನ್ಯತೆಗೂ ಉತ್ತಮಿಕೆಗೂ ಇರುವ ಅಂತರ. —ಅನಾಮಿಕ